

**ಎಷ್ಟೆಲ್ಲ ಹೋರಾಟಗಳ ಬಳಿಕ ಮಹಿಳಾಪರವಾದ ಒಂದು ಕಾನೂನು ರೂಪು ಪಡೆಯುತ್ತದೆ. ಕಾನೂನು ರೂಪುಗೊಂಡರಷ್ಟೇ ಸಾಲದು; ಕಾನೂನಿನ ಅರಿವನ್ನು ಜನರ ಬಳಿಗೆ ಕೊಂಡೊಯ್ಯುವ ಕೆಲಸವೂ ಅಷ್ಟೇ ಸಮರ್ಪಕವಾಗಿ ಆಗಬೇಕಾಗುತ್ತದೆ.**

ಪ್ರಶ್ನೆಗಳು ಮತ್ತು ಆಲೋಚನೆಗಳು ಮುನ್ನೆಲೆಗೆ ಬರುತ್ತವೆ.

ಸಿ.ಡಿ. ಪ್ರಕರಣವು ಮಾಧ್ಯಮಗಳಲ್ಲಿ ವರದಿಯಾದಾಗ, ಪ್ರಕರಣದ ಮೂಲವಿಚಾರಗಳಿಗಿಂತಲೂ ಹೆಚ್ಚಾಗಿ, ಆ ಸಂದರ್ಭದಲ್ಲಿ ಬಳಕೆಯಾದ ಭಾರವಾದ ಪದಗಳೇ ಹೆಚ್ಚು ಅಚ್ಚರಿ ಉಂಟುಮಾಡುತ್ತವೆ. ಸಿ.ಡಿ.ಯಲ್ಲಿ ಇರುವ ವಿಡಿಯೊದಲ್ಲಿ ಸಚಿವರೊಬ್ಬರು ಇದ್ದಾರೆ ಎಂಬ ಆರೋಪ ಮತ್ತು ಅದರ ಸತ್ಯಾಸತ್ಯತೆಗಳು ಏನು ಎಂಬ ಚರ್ಚೆಯ ಹೂರಣಕ್ಕಿಂತಲೂ ಹೆಚ್ಚಾಗಿ, ಭಯಂಕರವಾದ ವಿಶೇಷಣಗಳೇ ಸುದ್ದಿಗೆ ರಂಜನೆಯ ಬಣ್ಣವನ್ನು ತುಂಬಿದವು. ಹಿಂದಿನ ಕಾಲದಲ್ಲಿ ಬಾವಿಕಟ್ಟೆಯಲ್ಲಿ ಸೇರಿ ನಡೆಸುವ ಗಾಳಿಮಾತುಗಳಲ್ಲಿ, 'ಹಾಗಂತೆ, ಹೀಗಂತೆ' ಎಂಬ ಬೀಸು ಹೇಳಿಕೆಗಳಂತೆಯೇ ವರದಿಗಳೂ ಗೋಚರಿಸಿದಾಗ, ನಮ್ಮ ಸಮಾಜದಲ್ಲಿ ಶಿಕ್ಷಿತವರ್ಗದವರ ಯೋಚನೆಯೂ ಈ ದಿಕ್ಕಿನಲ್ಲಿ ಎಷ್ಟೊಂದು ಹಿಂದುಳಿದುಬಿಟ್ಟಿದೆಯಲ್ಲಾ ಅನ್ನಿಸುತ್ತದೆ.

ಒಂದೇ ಒಂದು ಬಾರಿಯಾದರೂ, ಯಾವ ಕುಟುಂಬದ ಹೆಣ್ಣುಮಗಳೋ ಏನೊ, ಯಾವ ಅನಿವಾರ್ಯತೆ ಅಥವಾ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಬಿದ್ದಳೋ ಏನೋ, ನಮ್ಮೆಲ್ಲರ ಒರಟು ಮಾತುಗಳು ಆಕೆಯ ಬಂಧುಗಳನ್ನು ಇರಿಯಬಹುದು ಎಂಬ ಅಳುಕು ಎಲ್ಲಿಯೂ ಕಾಣಿಸಲೇ ಇಲ್ಲ. ಯಾರಿಗಾದರೂ ನೋವಾಗಲೀ ಬಿಡಲಿ, ವರದಿಯಿಂದು ಎಷ್ಟೆಲ್ಲ ಆಯಾಮಗಳನ್ನು ತೆಗೆದುಕೊಳ್ಳಬಹುದು ಎಂದಮೇಲೆ ಆ ಯಾವುದೇ ಆಯಾಮಗಳನ್ನೂ ಬಿಡಕೂಡದು ಎನ್ನುವ ತರ್ಕವನ್ನು ಒಪ್ಪಿಕೊಂಡರೂ, ಸುದ್ದಿಯ ಮೂಲೆಮೂಲೆಗಳನ್ನು ಬಗೆದು ಹರಸಾಹಸ ಮಾಡಿ ತಂದ ಮಾಹಿತಿಗಳಂತೆ ಭಾಸವಾಗುವ ಸಿ.ಡಿ. ಪ್ರಕರಣದ ಬರಹಗಳಲ್ಲಿ, ವರದಿಗಳಲ್ಲಿ ಇದ್ದುದು ಕೇವಲ ಊಹೆಗಳಷ್ಟೇ.

## ಉತ್ಪ್ರೇಕ್ಷೆಗಳ ಕಾಲ

'ಹೆಣ್ಣಾದವಳಿಗೆ ಪ್ರಭುತ್ವವನ್ನೇ ಅಲ್ಲಾಡಿಸುವ ಶಕ್ತಿಯಿದೆ ನೋಡಿ' ಎಂಬ ಮತ್ತೊಂದು ಉತ್ಪ್ರೇಕ್ಷೆಯ ಮಾತೂ ಕೇಳಿಬಂತು. 'ಇಂತಹ ಸಿ.ಡಿ. ಪ್ರಕರಣಗಳಾದಾಗ ಮಾತ್ರ ಕೇಳಿಬರುವ ಉತ್ಪ್ರೇಕ್ಷೆಯು, ರಾಜಕೀಯ ಮೀಸಲಾತಿ ಪಡೆಯುವ ಹೋರಾಟದ ಸಂದರ್ಭದಲ್ಲಿಯೋ, ಮಹಿಳೆಯರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತಹ ಕಾನೂನು ನಿರೂಪಣೆಯ ಹೋರಾಟಗಳ ಸಂದರ್ಭದಲ್ಲಿಯೋ ಕೇಳಿಬರುವುದಿಲ್ಲ?' ಎನ್ನುವ ಲತಾಶ್ರೀ ಶೆಟ್ಟಿ, 'ಹೆಣ್ಣಿನ ರಕ್ಷಣೆಗಾಗಿ ಲಭ್ಯವಾಗಿರುವ ಅವಕಾಶಗಳನ್ನೇ ಗುರಾಣಿಯಾಗಿಸಿಕೊಂಡು ನಡೆಯುವ ರಾಜಕೀಯ ಚದುರಂಗದಾಟಗಳು ಹೊಸದೇನೂ ಅಲ್ಲ' ಎಂದೂ ಹೇಳುತ್ತಾರೆ. ಅಂದಹಾಗೆ, ಲತಾಶ್ರೀ ಕಾಲೇಜು ಪ್ರಾಂಶುಪಾಲರು.

ಮತ್ತೊಂದು ಪ್ರಕರಣ ಗಮನಿಸೋಣ. ಗಂಡಹೆಂಡತಿ ಪುಟ್ಟ ಮಗಳ ಸಂಸಾರ. ಗಂಡನೊಡನೆ ಬಾಳುವೆ ಮಾಡುವುದು ಬಹಳ ಕಷ್ಟ ಎಂಬ ಪರಿಸ್ಥಿತಿ ಎದುರಾದಾಗ ಅವಳು

# ಇದು ಹನಿಟ್ರ್ಯಾಪ್ ಅಲ್ಲ, ಮ್ಯಾನ್ ಹೋಲ್



ಹನಿಟ್ರ್ಯಾಪ್ ಅಂದರೆ ಅದೇನೋ ತುಂಬಾ ಮುಗ್ಧ, ಸುಂದರ, ರಹಸ್ಯತಮ ಪ್ರೇಮ ಪ್ರಕರಣವೇನೋ ಎಂಬಂತೆ ಒಂದು ಕಲ್ಪನೆ ಮೂಡುತ್ತದೆ. ನಿಜವಾಗಿಯೂ ನೋಡಿದರೆ ಹನಿಟ್ರ್ಯಾಪ್ ಎಂಬುದು ಶುದ್ಧಾತಿಶುದ್ಧ ಲೈಂಗಿಕ ಸಂಬಂಧ. ಇದರಲ್ಲಿ ಮೈಯ ಸಂಬಂಧ (ಅಚ್ಚಕನ್ನಡದಲ್ಲಿ ಹೇಳುವುದಾದರೆ ತೆವಲು) ಬಿಟ್ಟರೆ ಬೇರೆ ಯಾವ ಸೀಮೆಯ ಗೌರವಾರ್ಹತೆಯೂ ಇಲ್ಲ. ಉತ್ತಮ ಹಾಗೂ ಶಕ್ತ ಸ್ಥಾನದಲ್ಲಿರುವ ಒಬ್ಬ ಗಂಡಸು ತನ್ನ ಸಮತೋಲನವನ್ನು ತನ್ನ ಸುತ್ತ ನಲಿಯುವ ಆಕರ್ಷಣೀಯ ಹೆಣ್ಣಿಗಾಗಿ ತಾನು ಸಾಮಾಜಿಕವಾಗಿ ಗಳಿಸಿದ ಗೌರವ, ಘನತೆ, ತನ್ನ ಪರಿಶ್ರಮದಿಂದ ಪಡೆದ ಹುದ್ದೆಯ ಜವಾಬ್ದಾರಿಯನ್ನೇ ಮರೆತು, ಲೈಂಗಿಕ ಜಾಲಕ್ಕೆ ಸಿಲುಕಿ ತನ್ನ ಕೈಯಾರ ತಾನೇ ತನ್ನ ಭವಿಷ್ಯಕ್ಕೆ ಕುಂದು ತರುವುದೇ ಅಲ್ಲದೆ ತನ್ನ ಹುದ್ದೆಗೆ ಸಂಬಂಧಪಟ್ಟ ಅತ್ಯಮೂಲ್ಯ ಮಾಹಿತಿ ಅಥವಾ ಮತ್ತಾವುದೋ ಸಂಪನ್ಮೂಲಗಳನ್ನು ಯಾವ ಜವಾಬ್ದಾರಿಯೂ ಇಲ್ಲದೆ ಬಹಿರಂಗಪಡಿಸುವುದು. ಬೇರೊಬ್ಬ ಗಂಡು ಕಾನೂನುಬಾಹಿರ ಕೃತ್ಯ ಮಾಡಿದಷ್ಟೇ ತಪ್ಪು ಇದೂ ಕೂಡ. ಸಾಮಾನ್ಯವಾಗಿ ರಾಷ್ಟ್ರಕ್ಕೆ ಸಂಬಂಧಿಸಿದ ರಹಸ್ಯಗಳನ್ನು ತಿಳಿದುಕೊಳ್ಳಲು ಇದನ್ನು ಇತಿಹಾಸದ ಉದ್ದಕ್ಕೂ ಬಳಸಿದ ಉದಾಹರಣೆಗಳು ಇವೆ. ಇದರಲ್ಲಿ ಹೆಣ್ಣು ಒಂದು ಪಾತ್ರ ಮಾತ್ರ. ತನ್ನ ಕೆಲಸ ತಾನು ಮಾಡಿ ಹೋಗುವಷ್ಟು ಜವಾಬ್ದಾರಿ ಅವಳಿಗೆ ಇರುತ್ತದೆ. ಅವಳನ್ನು ಕೇವಲ ಪ್ರೊಫೆಷನಲ್ ಆಗಿ ನೋಡಬೇಕೇ ಹೊರತು ನೈತಿಕವಾಗಿ ಅವಳು ಮಾಡಿದ್ದು ತಪ್ಪು ಅಂತೆಲ್ಲಾ ವಾದಿಸಿ ಗಂಡಸನ್ನು ಬರೀ 'ದುರ್ಬಲ' ಎಂದು ನೋಡಿದರೆ ಗಂಡಸಿನ ಮೇಲಿರಬೇಕಾದ ಜವಾಬ್ದಾರಿಯನ್ನು ಪ್ರಶ್ನೆ ಮಾಡದೇ ಹಾಗೇ ಬಿಟ್ಟಂತೆ ಆಗುತ್ತದೆ. ಇದು ಹನಿಟ್ರ್ಯಾಪ್ ಅಲ್ಲ. ಮ್ಯಾನ್ ಹೋಲ್! ಒಬ್ಬ ಗಂಡಸು ತನ್ನ ಅಧಃಪತನವನ್ನು ತಾನೇ ಬರೆದುಕೊಳ್ಳುವ ಒಂದು ಬೇಜವಾಬ್ದಾರಿ ಸನ್ನಿವೇಶ.

—ಪ್ರೀತಿ ನಾಗರಾಜ, ಲೇಖಕಿ–ಪತ್ರಕರ್ತೆ